ಸಂಸಾರದಲ್ಲಿ ಸುಖ, ಶಾಂತಿ, ಸಮೃದ್ಧಿ ನೆಲೆಸಬೇಕಾದರೆ ಹೆಂಡ್ತಿ ಮಾತು ಕೇಳ್ಬೇಕು. ಇದು ಅನುಭವಸ್ಥರ ಮಾತು. ನ್ಯಾಯಾಲಯ ಸಹ ಇತ್ತೀಚೆಗೆ ಹಾಗೇ ಅಭಿಪ್ರಾಯಪಟ್ಟಿದೆ.

ವಿಶ್ವ ತನ್ನ ಮಡದಿ ವಿಶಾಲು ಮಾತಿಗೆ ಒಪ್ಪಿ ಅವಳ ಆಸೆಯನ್ನು ಪೂರೈಸಲು ಆಸ್ಟ್ರೇಲಿಯಾಗೆ ಬಂದ. ಸಾವಿರಾರು ಕಾಂಗರೂಗಳನ್ನು ಒಟ್ಟಿಗೆ ನೋಡುವ ವಿಶಾಲೂ ಬಯಕೆ ನೆರವೇರಿತು. ಆಳೆತ್ತರದ ಗೂಂಡಾ ಕಾಂಗರೂಗಳನ್ನು ನೋಡಿ 'ನಿಮ್ಮಷ್ಟೇ ಎತ್ತರ ಇದೆ ಕಣ್ರೀ' ಎಂದು ಅಚ್ಚರಿಪಟ್ಟಿದ್ದಳು. ಪ್ರವಾಸ ಮುಗಿಸಿ ಭಾರತಕ್ಕೆ ಮರಳಲು ಸಿಡ್ನಿ ಏರ್‌ಪೋರ್ಟ್‌ಗೆ ಬಂದಾಗ ಕೊರೊನಾ ಆತಂಕ ಕಾದಿತ್ತು. ಫ್ಲೈಟ್ ಯಾವಾಗ ಹೊರಡುವುದು ಎಂಬುದು ನಿಶ್ಚಿತವಾಗಿರಲಿಲ್ಲ. ಗಂಟೆಗಟ್ಟಲೆ ಕಾಯಬೇಕಾದ ಪರಿಸ್ಥಿತಿ. ಗೆಸ್ಟ್ ರೂಂಗಳಲ್ಲಿ ವಿಶ್ರಾಂತಿಗೆ ಅವಕಾಶವಿತ್ತು. ಸಮಯ ಹೇಗೆ ಕಳೆಯುವುದು ಎಂದು ಅತ್ತಿತ್ತ ನೋಡಿದಾಗ ವಿಶ್ವನ ಕಣ್ಣಿಗೆ ಬಿದ್ದಿದ್ದು ಪ್ರಪಂಚದ

'ನಮ್ಮ ದೇಶದಲ್ಲಿ ಸಿ.ಡಿ. ಅಫೆನ್ಸ್ ಅಲ್ಲ. ಒಬ್ಬ ಮಿನಿಸ್ಟರ್‌ಗೆ ಎರಡು ವ್ಯಕ್ತಿತ್ವ ಇರುತ್ತೆ. ಅವನು ಡೇ ಟೈಮಲ್ಲಿ ಮಿನಿಸ್ಟರು, ಪೊಲಿಟಿಕಲ್ ಲೈಫ್ ಇರುತ್ತೆ. ನೈಟ್ ಟೈಮಲ್ಲಿ ಪರ್ಸನಲ್ ಲೈಫ್ ಇರುತ್ತೆ.

